# 2014–15ನೇ ಸಾಲಿನ ತೋಟಗಾರಿಕೆ ಮೂಲಭೂತ ಅಭಿವೃದ್ಧಿ ಯೋಜನೆ

## ಅನುಷ್ಠಾನದ ಮಾರ್ಗಸೂಚಿಗಳು:–

1) ಯೋಜನೆಯ ಹಸರು: ತೋಟಗಾರಿಕೆ ಮೂಲಭೂತ ಅಭಿವೃದ್ಧಿ ಯೋಜನೆ

ಲೆಕ್ಕಶೀರ್ಷಿಕೆ:2401–00–119–6–03

ಉಪ ಶೀರ್ಷಿಕೆ: ಆಧುನೀಕರಣ ಯೋಜನೆ (125)

ಭೂಮಿ ಮತ್ತು ಕಟ್ಟಡಗಳು (147)

**ಯೋಜನೆಯ ಮಾರ್ಗಸೂಚಿ:**

1) ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಿಂದ ತಯಾರಿಸತಕ್ಕದ್ದು.
2) ಕಟ್ಟಡ ನಿರ್ಮಿಸುವ ಸ್ಥಳವು ಯಾವುದೇ ವಿವಾದಗಳಿಂದ ಕೂಡಿರತಕ್ಕದ್ದಲ್ಲ
3) ಹಳೆ ಕಟ್ಟಡವನ್ನು ನೆಲಸಮಗೊಳಿಸಿ ಹೊಸ ಕಟ್ಟಡ ಕಟ್ಟುವ ಸಂದರ್ಭದಲ್ಲಿ ಪ್ರಸ್ತುತ ಇರುವ ಕಛೇರಿ ಕಟ್ಟಡವು ವಾಸ ಸ್ಥಳಕ್ಕೆ ಯೋಗ್ಯವಿಲ್ಲವೆಂದು ಲೋಕೋಪಯೋಗಿ ಇಲಾಖೆವತಿಯಿಂದ ದೃಢೀಕರಿಸಿ ದೃಢೀಕರಣ ಪತ್ರ ಸಲ್ಲಿಸುವುದು.
4) ಹೊಸ ಕಛೇರಿ ಕಟ್ಟಡ ನಿರ್ಮಿಸಿದ ನಂತರ ಹಳೆಯ ವಾಸಕ್ಕೆ (ಯೋಗ್ಯವಿಲ್ಲವೆಂದು ದೃಢೀಕರಿಸಿದ) ಕಟ್ಟಡವನ್ನು ನೆಲಸಮಗೊಳಿಸಬೇಕು.
5) ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದ ಜಾಗದಲ್ಲಿ ಕಟ್ಟಡ ಕಟ್ಟಬೇಕಾದರೆ KSHDA ಅನುಮತಿ ಕಡ್ಡಾಯವಾಗಿ ಪಡೆದು ಪತ್ರ ಸಲ್ಲಿಸುವುದು.
6) ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಕಟ್ಟಡ ನಿರ್ಮಿಸಲು ಹೊಸ ವಿನ್ಯಾಸವನ್ನು ನೀಡಲಾಗುವುದು ಅದರಂತೆ ಕಟ್ಟಡ ನಿರ್ಮಿಸುವುದು.
7) ಅಂದಾಜು ಮೊತ್ತವು ರೂ. 25.00 ಲಕ್ಷ ಮೀರಿದರೆ, ಆಡಳಿತಾತ್ಮಕ ಮಂಜೂರಾತಿ ಪಡೆಯಲು ನಿರ್ದೇಶನಾಲಯಕ್ಕೆ ಸಲ್ಲಿಸುವುದು.
8) ಅನುದಾನ ಬಿಡುಗಡೆಯಾದ ಕೂಡಲೇ ಅಂದಾಜು ಪಟ್ಟಿಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸಲ್ಲಿಸುವುದು.
9) ಪ್ರತಿಯೊಂದು ಕಾಮಗಾರಿಯ ಅಂದಾಜುಪಟ್ಟಿಯ ಫೋಟೋ ಕಾಪಿಯನ್ನು ಆಡಳಿತ ಶಾಖೆಗೆ ಸಲ್ಲಿಸುವುದು
10) ಕಂಪೌಂಡು ಗೋಡೆ ಗೋಡಾನ್ ನಿರ್ಮಿಸಲು ಈ ಯೋಜನೆಯಡಿ ಅವಕಾಶವಿರುವುದಿಲ್ಲ
11) ಎಂಪಿಕ್ ಅನುಮೋದನೆಯಾಗದೆ ಯಾವುದೇ ಕಾಮಗಾರಿಯನ್ನು ಕೈಗೊಂಡಲ್ಲಿ ಅದರ ವೆಚ್ಚವನ್ನು ಭರಿಸಲಾಗುವುದಿಲ್ಲ ಯಾವುದೇ ಸಂದರ್ಭದಲ್ಲೂ ಕಾಮಗಾರಿ ಮುಗಿಸಿದ ನಂತರ ಅನುದಾನ ಕೇಳಿದಲ್ಲಿ ಪ್ರಸ್ತಾವನೆಯನ್ನು ಸಾರಾಸಗಾಟಾಗಿ ತಿರಸ್ಕರಿಸಲಾಗುವುದು.

**II ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

1) ಈ ಯೋಜನೆಯನ್ನು ಮೊದಲಿಗೆ 1994-95ನೇ ಸಾಲಿನಲ್ಲಿ ಸರ್ಕಾರದ ದಿ:-25-4-1994 ರ ಆದೇಶ ಸಂಖ್ಯೆ ಕೃತೋಇ 42 ತೋಯೋಕಾ 94 ರಲ್ಲಿ ಮಂಜೂರು ಮಾಡಿ, ಇಲ್ಲಿಯವರೆಗೆ ಕಾಲಕಾಲಕ್ಕೆ ಮುಂದುವರೆಸಿಕೊಂಡು ಬರಲಾಗುತ್ತಿದೆ. ಈ ಯೋಜನೆಯಡಿ ಇಲಾಖಾ ತೋಟಗಾರಿಕೆ ಕ್ಷೇತ್ರಗಳಲ್ಲಿ ತಾಲ್ಲೂಕು/ಜಿಲ್ಲೆ ಮತ್ತು ನಿರ್ದೇಶನಾಲಯದ ಕಛೇರಿಗಳಲ್ಲಿ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಕಟ್ಟಡ ಹಾಗೂ ಪ್ರಯೋಗಾಲಯಗಳ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

2)2004-05ನೇ ಸಾಲಿನಲ್ಲಿ ಈ ಯೋಜನೆಯೊಂದಿಗೆ ತೋಟಗಾರಿಕೆ ಕಛೇರಿಗಳ ಆಧುನೀಕರಣ ಯೋಜನೆಯನ್ನು ವಿಲೀನಗೊಳಿಸಲಾಗಿದೆ. ಕಛೇರಿಗಳಲ್ಲಿ ಅಗತ್ಯವಾಗಿ ಬೇಕಾದ ಕಛೇರಿ ಉಪಕರಣಗಳು, ಎಲೆಕ್ಟ್ರಾನಿಕ್ ಯಂತ್ರೋಪಕರಣಗಳಾದ ಕಂಪ್ಯೂಟರ್, ಜೆರಾಕ್ಸ್, ಫ್ಯಾಕ್ಸ್ ಮುಂತಾದ ಉಪಕರಣಗಳನ್ನು ಅಳವಡಿಸುವುದಲ್ಲದೆ, ಸಾರಿಗೆ ಸಂಪರ್ಕ ಸರಿಯಾಗಿ ಇಲ್ಲದ ಕಡೆ ಟೆಲಿಫೋನ್ ಸೌಲಭ್ಯಗಳನ್ನು ಒದಗಿಸುವ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗುವುದು ಹಾಗೂ ನಿರ್ದೇಶನಾಲಯದಲ್ಲಿರುವ ಗಣಕಕೇಂದ್ರದ ನಿರ್ವಹಣೆ ಮಾಡಲಾಗುವುದು.

3) **ಉದ್ದೇಶಗಳು:**

1. ಮೂಲಭೂತ ಸೌಕರ್ಯವಾದ ಕಛೇರಿ ಕಟ್ಟಡಗಳನ್ನು ಹಾಗೂ ಇತರೆ ಅವಶ್ಯಕವಾದ ಪ್ರಯೋಗಾಲಯಗಳ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳುವುದು.
2. ಕಛೇರಿಗಳನ್ನು ಆಧುನೀಕರಿಸುವುದು

**4) ಕಾರ್ಯಕ್ರಮಗಳು:**

| ಕ್ರ. ಸಂ | ಕಾರ್ಯಕ್ರಮಗಳು | ಆರ್ಥಿಕ (ರೂ.ಲಕ್ಷಗಳಲ್ಲಿ) |
|---|---|---|
| 1. | ತೋಟಗಾರಿಕೆ ಕಛೇರಿಗಳ ಆಧುನೀಕರಣ | 100.00 |
| 2. | ವಿವಿಧ ತಾಲ್ಲೂಕು/ಜಿಲ್ಲೆಗಳಲ್ಲಿ ಮತ್ತು ನಿರ್ದೇಶನಾಲಯದ ಕಛೇರಿಗಳಲ್ಲಿ ಮೂಲ ಸೌಕರ್ಯಗಳಾದ ಕಛೇರಿ ಕಟ್ಟಡಗಳನ್ನು ಹಾಗೂ ಇತರೆ ಅವಶ್ಯಕವಾದ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವುದು. | 200.00 |
| | **ಒಟ್ಟು** | **300.00** |

5) ಈ ಯೋಜನೆಗೆ 2014-15ನೇ ಸಾಲಿನಲ್ಲಿ ಒಟ್ಟು ರೂ. 300.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.